## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1604 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು ) |
| ಉತ್ತರಿಸುವ ದಿನಾಂಕ | : | 21.03.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ. ಸ. | ಪ್ರಶ್ನೆ | ಉತ್ತರ |
|---|---|---|
| ಅ | 2023-24 ಮತ್ತು 2024-25ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಸಂವಿಧಾನ ದಿನಾಚರಣೆಯ ಕಾರ್ಯಕ್ರಮವನ್ನು ಯಾವ ಯಾವ ದಿನಾಂಕಗಳಂದು ಅಚರಿಸಲಾಗುತ್ತಿದೆ. ಈ ಸಂಬಂಧ ಯಾವ ಯಾವ ಕಾರ್ಯಕ್ರಮಗಳನ್ನು ಯಾವ ಯಾವ ದಿನಾಂಕಗಳಂದು ಆಚರಿಸಲಾಗುತ್ತಿದೆ? | 2023-24 ಮತ್ತು 2024-25ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಸಂವಿಧಾನ ದಿನಾಚರಣೆಯ ಕಾರ್ಯಕ್ರಮವನ್ನು ದಿನಾಂಕ:26.11.2023 ಮತ್ತು 26.11.2024 ರಂದು ಆಚರಿಸಲಾಗಿರುತ್ತದೆ. |
| ಆ | ಸಂವಿಧಾನ ದಿನಾಚರಣೆಗೆ ಸಂಬಂಧಿಸಿದಂತೆ ಎಲ್ಲಾ ಕಾರ್ಯಕ್ರಮಗಳನ್ನು ಆಚರಿಸಲು 2023-24 ಮತ್ತು 2024-25ನೇ ಸಾಲಿನಲ್ಲಿ ಎಷ್ಟು ಮೊತ್ತವನ್ನು ಮೀಸಲಿರಿಸಲಾಗಿದ್ದು, ಎಷ್ಟು ಖರ್ಚಾಗಿದೆ. ಹಣಕಾಸು ಯಾವ ಮೂಲಗಳಿಂದ ಬಂದಿದೆ. ಇದರ Head of Account ಯಾವುದು ಇದಕ್ಕೆ ಅನುಮತಿ ನೀಡಿದವರಾರು (ಸಂಪೂರ್ಣ ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಿರುವುದಿಲ್ಲ ಮತ್ತು 2024-25ನೇ ಸಾಲಿನಲ್ಲಿ ವಿ.ಡಿ.ಪಿ ರಾಜಸ್ವ ಲೆಕ್ಕ ಶೀರ್ಷಿಕೆ: 2225-01-796-0-02(059) ರಡಿ ಪ್ರಜಾಪ್ರಭುತ್ವ ಸ್ಥಾಪನೆ ಮತ್ತು ಸಂವಿಧಾನ ದಿನಾಚರಣೆ ಸಂಬಂಧ ರೂ.300.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಈ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 473 ಎಸ್‌ಎಲ್‌ಪಿ (ಭಾಗ-1) ದಿನಾಂಕ: 20.11.2024ರನ್ವಯ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಸಿದ್ಧ ಉದ್ಯಾನವನಗಳಲ್ಲಿ ಕನ್ನಡ ಮತ್ತು ಆಂಗ್ಲಭಾಷೆಯ 10*6 ಅಡಿಗಳ ಸಂವಿದಾನ ಪೀಠಿಕೆ ಉದ್ಘಾಟನೆ ಮತ್ತು ಇನ್ನಿತರ ಕಾರ್ಯಕ್ರಮಕ್ಕೆ ನಗರಪಾಲಿಕೆ ವ್ಯಾಪ್ತಿ ಜಿಲ್ಲೆಗಳಿಗೆ ರೂ.25.00ಲಕ್ಷಗಳು ಮತ್ತು ಬಿಬಿಎಂಪಿ ವ್ಯಾಪ್ತಿಗೆ ರೂ.50.00 ಲಕ್ಷಗಳು ಸೇರಿ ಒಟ್ಟಾರೆ ರೂ.300.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |
| ಇ | ಸಂವಿಧಾನ ದಿನಾಚರಣೆಯನ್ನು ಆಚರಿಸಲು ಯಾವ ಸಂಸ್ಥೆಯನ್ನು ನೇಮಕ ಮಾಡಲಾಗಿದೆ. ಅದೇ | ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯ ಮುಖಾಂತರ ನೇಮಕ ಮಾಡಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂ: ಆಇ |

| | | |
|---|---|---|
| | ಸಂಸ್ಥೆಯನ್ನು ನೇಮಕ ಮಾಡಲು ಕಾರಣವೇನು. ಸದರಿ ಕಾರ್ಯಕ್ರಮಕ್ಕೆ ಎಷ್ಟು ಮೊತ್ತವನ್ನು ಪಾವತಿ ಮಾಡಲಾಗಿರುತ್ತದೆ. (ಹೆಸರು/ಕಂಪನಿ/ಸಂಘ/ಸಂಸ್ಥೆಗಳ ಸಂಪೂರ್ಣ ವಿವರ ನೀಡುವುದು) | 179 ವೆಚ್ಚ -12/2024 ದಿನಾಂಕ: 07.03.2024ರಲ್ಲಿ ಸರ್ಕಾರಿ ಕಾರ್ಯಕ್ರಮಗಳು, ಸಮಾರಂಭಗಳನ್ನು ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ. ಈ ಕಾರಣದಿಂದ ನೇಮಕ ಮಾಡಲಾಗಿರುತ್ತದೆ. ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ರೂ.44,13,679/- ಗಳನ್ನು ಮಾರ್ಕೆಟಿಂಗ್ ಕಮ್ಯೂನಿಕೇಶನ್ ಅಂಡ್ ಅಡ್ವಟೈಸಿಂಗ್ ಲಿಮಿಟೆಡ್, ಬೆಂಗಳೂರು ರವರಿಗೆ ಪಾವತಿ ಮಾಡಲಾಗಿರುತ್ತದೆ. |
| ಈ | ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಮಾನವ ಸರಪಳಿ ಮಾಡಲು ಎಷ್ಟು ವೆಚ್ಚವಾಗಿದೆ. ಈ ಅನುದಾನವನ್ನು ಎಲ್ಲಿಂದ ಭರಿಸಲಾಗಿದೆ. ಮಕ್ಕಳ ರಕ್ಷಣೆಯ ಕಾನೂನು ಬಗ್ಗೆ ನಿಮಗೆ ಅರಿವಿದೆಯೇ (ಸಂಪೂರ್ಣ ಮಾಹಿತಿ ನೀಡುವುದು. | ಈ ಕಾರ್ಯಕ್ರಮಕ್ಕೆ ಸರ್ಕಾರದ ಆದೇಶ ಸಂಖ್ಯೆ: ಸಕಇ 209 ಎಂಡಿಎಸ್ 2024 ದಿನಾಂಕ: 29.08.2024ರನ್ವಯ ಪ.ಜಾ.ಉ.ಯೋ ಶಾಖೆಯಿಂದ ರೂ.118.50 ಲಕ್ಷಗಳನ್ನು ಹಾಗೂ ಕ್ರೈಸ್‌ನಿಂದ ರೂ.118.50 ಲಕ್ಷಗಳು ಸೇರಿ ಒಟ್ಟು ರೂ.237.00ಲಕ್ಷಗಳನ್ನು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಘಕ್ಕೆ ರೂ.200.00 ಲಕ್ಷಗಳನ್ನು ಸೇರಿ ಒಟ್ಟಾರೆ ರೂ.437.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |
| ಉ | ಸಂವಿಧಾನ ದಿನಾಚರಣೆಯ ಅಂಗವಾಗಿ ಸಂವಿಧಾನ ಪೀಠಿಕೆ, ವಾಚನ, ಮುದ್ರಣ, ಪ್ರಸಾರ ಸಂಬಂಧಿತ ಕಾರ್ಯಕ್ರಮಗಳ ಆಚರಣೆಯ ಉದ್ದೇಶವೇನು, ಉದ್ದೇಶವು ಸಫಲವಾಗಿದೆಯೇ: ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 473 ಎಸ್‌ಎಲ್‌ಪಿ (ಭಾಗ-1) ದಿನಾಂಕ: 20.11.2024ರನ್ವಯ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಸಿದ್ಧ ಉದ್ಯಾನವನಗಳಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯ 10*6 ಅಡಿಗಳ ಸಂವಿಧಾನ ಪೀಠಿಕೆ ಉದ್ಘಾಟನೆ ಮತ್ತು ಇನ್ನಿತರ ಕಾರ್ಯಕ್ರಮಕ್ಕೆ ನಗರಪಾಲಿಕೆ ವ್ಯಾಪ್ತಿ ಜಿಲ್ಲೆಗಳಿಗೆ ರೂ.25.00ಲಕ್ಷಗಳು ಮತ್ತು ಬಿಬಿಎಂಪಿ ವ್ಯಾಪ್ತಿಗೆ ರೂ.50.00ಲಕ್ಷಗಳು ಸೇರಿ ಒಟ್ಟಾರೆ ರೂ.300.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |

**ಸಕಇ/ 280/ಪಕವಿ/2025**

**(ಡಾ. ಹೆಚ್.ಸಿ. ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು